ಭದ್ರತಾ ಸಿಬ್ಬಂದಿಗೆ ಹೇಳಿದರು. ಗಾರ್ಡ್ ಬಂದು ಲೋಹಿಯಾಗೆ ಫ್ರೆಂಚ್ ಭಾಷೆಯಲ್ಲಿ ಹೊರ ಹೋಗಲು ಹೇಳಿದ; ಲೋಹಿಯಾ ಹಿಂದಿಯಲ್ಲಿ ಉತ್ತರ ಕೊಟ್ಟರು. ತಬ್ಬಿಬ್ಬಾದ ಗಾರ್ಡ್ ಇಂಗ್ಲಿಷಿನಲ್ಲಿ ಹೇಳಿದ. ಆಗಲೂ ಲೋಹಿಯಾ ಹಿಂದಿಯಲ್ಲಿ ಉತ್ತರ ಕೊಟ್ಟರು. ಲೋಹಿಯಾ, ಮೆನಜಿಸ್ ಇಬ್ಬರನ್ನೂ ಹೊರ ಹಾಕಿದ ಮೇಲೆ ಗಾರ್ಡ್ ಹಾಗೂ ಅಧಿಕಾರಿಗೆ ಈ ಕಿಲಾಡಿಗಳಿಗೆ ಇಂಗ್ಲಿಷ್, ಫ್ರೆಂಚ್ ಮಾತ್ರವಲ್ಲ, ಜರ್ಮನ್ ಭಾಷೆಯೂ ಬರುತ್ತದೆ ಎಂಬುದು ಗೊತ್ತಾಯಿತು!

ಮಾರನೆಯ ದಿನ ಲೋಹಿಯಾ ಹಿಂದಿನ ದಿನದ ಸಭೆಯ ಅಧ್ಯಕ್ಷತೆ ವಹಿಸಿದ್ದ ರೊಮೇನಿಯಾ ಸ್ಟೇಟಸ್ಕ್‌ಗೆ ಬಹಿರಂಗ ಪತ್ರ ಬರೆದರು. ಆ ಪತ್ರದಲ್ಲಿ ಭಾರತದ ಧರಸಾನಾದಲ್ಲಿ ಸತ್ಯಾಗ್ರಹಿಗಳ ಮೇಲೆ ಬ್ರಿಟಿಷ್ ಸರ್ಕಾರದ ಪೊಲೀಸರು ನಡೆಸಿದ ಹಲ್ಲೆಗಳನ್ನು ಕುರಿತ ವಿವರಗಳಿದ್ದವು. ಗಂಗಾಸಿಂಗ್ ಬ್ರಿಟಿಷ್ ಆಡಳಿತದ ಪರವಾಗಿ ಆಡಿದ್ದ ಮಾತುಗಳ ನ್ಯಾಯಬದ್ಧತೆಯನ್ನು ಲೋಹಿಯಾ ತೀಕ್ಷ್ಣವಾಗಿ ಪ್ರಶ್ನಿಸಿದ್ದರು. ಭಾರತದಲ್ಲಿರುವ ಬ್ರಿಟಿಷ್ ಸರ್ಕಾರಕ್ಕೆ ಭಾರತೀಯರು ಮಾನ್ಯತೆ ನೀಡಿಲ್ಲ ಎಂಬುದನ್ನು ಒತ್ತಿ ಹೇಳಿದ್ದರು. ಆ ಬಹಿರಂಗ ಪತ್ರವನ್ನು ಜಿನೇವಾದ ಪತ್ರಿಕೆಗಳು ಪ್ರಕಟಿಸಲು ಒಪ್ಪಲಿಲ್ಲ. ಕೊನೆಗೆ 'ಲೆ ಶಾವೆರ್ಝ್ ಹ್ಯೂಮನೈಟ್' ಪತ್ರಿಕೆ ಈ ಪತ್ರವನ್ನು ಪ್ರಕಟಿಸಿತು. ಪತ್ರಿಕೆಯ ಪ್ರತಿಗಳನ್ನು ಕೊಂಡು ಲೋಹಿಯಾ ಜನರಿಗೆ ಹಂಚಿದರು.

ಅಧ್ಯಯನದ ಜೊತೆಜೊತೆಗೇ ವಿವಿಧ ಸಿದ್ಧಾಂತಗಳ ಜನರ ನಡುವೆ ನಡೆಯುತ್ತಿದ್ದ ತೀವ್ರ ರಾಜಕೀಯ ಚರ್ಚೆಗಳಲ್ಲೂ ಲೋಹಿಯಾ ಭಾಗಿಯಾಗುತ್ತಿದ್ದರು. ಎಲ್ಲವನ್ನೂ ನೇರ, ಬಿಚ್ಚು ಮನಸ್ಸಿನಿಂದ ಚರ್ಚಿಸುತ್ತಿದ್ದ ಲೋಹಿಯಾ ಹಲ್ಲೆಗೊಳಗಾಗಬೇಕಾದ ಪ್ರಸಂಗಗಳೂ ಎದುರಾಗಿ, ಹೇಗೋ ಪಾರಾಗಿದ್ದರು. ಒಮ್ಮೆ ಲೋಹಿಯಾರ ಕಮ್ಯುನಿಸ್ಟ್ ಗೆಳೆಯ ಬ್ರಜೇಶ್ ಸಿಂಹ ಪಾಸ್‌ಪೋರ್ಟಿಲ್ಲದೆ ಬರ್ಲಿನ್‌ಗೆ ಬಂದರು. ಬ್ರಜೇಶರನ್ನು ಇರಿಸಿಕೊಂಡರೆ ಜೈಲು ಶಿಕ್ಷೆ, ಜರ್ಮನಿ ಬಿಡಬೇಕಾಗಬಹುದಾದ ಪರಿಸ್ಥಿತಿ ಎಲ್ಲವೂ ಲೋಹಿಯಾಗೆ ಎದುರಾಗುವ ಸಾಧ್ಯತೆಗಳಿದ್ದವು. ಹೀಗಿದ್ದೂ ಲೋಹಿಯಾ ಬ್ರಜೇಶ್ ಬರ್ಲಿನ್‌ನಲ್ಲಿ ಉಳಿಯಲು ವ್ಯವಸ್ಥೆ ಮಾಡಿದರು. ಕೆಲ ದಿನಗಳ ನಂತರ ಬ್ರಜೇಶ್ ಇಂಗ್ಲೆಂಡಿಗೆ ಹೊರಟರು.

ಗೆಳೆಯರಾಗಲಿ, ಯಾರೇ ಆಗಲಿ, ಅಪಾಯದಲ್ಲಿದ್ದಾಗ ಲಾಭ ನಷ್ಟಗಳ ಬಗ್ಗೆ ಚಣವೂ ಯೋಚಿಸದೆ ನೆರವಾಗುವ ಈ ಅದ್ಭುತ ಗುಣ ಕೊನೆತನಕ ಲೋಹಿಯಾರಲ್ಲಿತ್ತು. ಈ ಗುಣದಿಂದಾಗಿ ಲೋಹಿಯಾಗೆ ಎಲ್ಲೆಡೆಯಲ್ಲೂ ಗೆಳೆಯರಿರುತ್ತಿದ್ದರು. ಜರ್ಮನ್ ಕಮ್ಯುನಿಸ್ಟ್ ಸ್ನೇಹಿತರು ಅವರನ್ನು ಕಮ್ಯುನಿಸ್ಟ್ ಪಾರ್ಟಿಯ ಸಭೆಗಳಿಗೂ ಆಹ್ವಾನಿಸುತ್ತಿದ್ದರು. ಒಮ್ಮೆ ಸ್ಪೋರ್ಟ್ಸ್ ಪ್ಯಾಲೇಸ್‌ನಲ್ಲಿ ಕಮ್ಯುನಿಸ್ಟರ ಸಭೆಯಿತ್ತು. ಲೋಹಿಯಾ ಹೋಗುವ ಹೊತ್ತಿಗೆ ಹಾಲ್ ತುಂಬಿ ಹೋಗಿತ್ತು. ಪೊಲೀಸರನ್ನು ಭೇದಿಸಿ ಒಳಗೆ ಹೋಗುವುದು ಸಾಧ್ಯವಿರಲಿಲ್ಲ. ಜರ್ಮನ್ ಭಾಷೆಯಲ್ಲಿ ಆತ್ಮೀಯರನ್ನು 'ನೀನು, ತಾನು' ಎನ್ನುವ ರೂಢಿಯಿದೆ. ಲೋಹಿಯಾ ಹೊರಗೆ ನಿಂತಿರುವುದನ್ನು ನೋಡಿದ ಕಮ್ಯುನಿಸ್ಟ್ ಗೆಳೆಯ ಓಡಿಬಂದವನೇ 'ಬಾರಯ್ಯಾ ಬೇಗ' ಎನ್ನುತ್ತಾ, ಲೋಹಿಯಾ ತಮ್ಮ ಬಳಗದವರು ಎಂಬಂತೆ ಒಳಗೆ ಕರೆದುಕೊಂಡು ಹೋದ!

ಇಂಥ ಅನುಭವ ಹಿಟ್ಲರ್ ಸಭೆಗೆ ಹೋದಾಗಲೂ ಲೋಹಿಯಾಗೆ ಆಯಿತು. ಬರ್ಲಿನ್‌ನ ಟೆನ್ನಿಸ್ ಹಾಲ್‌ನಲ್ಲಿ ಹಿಟ್ಲರ್ ಸಭೆ ಏರ್ಪಾಡಾಗಿತ್ತು. ಲೋಹಿಯಾ ಹೋಗುವ ಹೊತ್ತಿಗಾಗಲೇ ಇಪ್ಪತ್ತು, ಮೂವತ್ತು ಸಾವಿರ ಜನರನ್ನು ಹಿಡಿಸುವ ಸಭಾಭವನ ತುಂಬಿ ಹೋಗಿತ್ತು. ಸಭಾಭವನಕ್ಕಿಂತ ಇನ್ನೂರು ಮೀಟರ್ ದೂರದಲ್ಲಿಯೇ ಪೊಲೀಸರು ಜನರನ್ನು ತಡೆಯುತ್ತಿದ್ದರು. ಆ ಸಭೆಗೆ ಪ್ರೇಕ್ಷಕರು ಟಿಕೆಟ್ ಪಡೆದು ಹೋಗಬೇಕಾಗಿತ್ತು. ಲೋಹಿಯಾ ತಮ್ಮ ಬಳಿಯಿದ್ದ ಟಿಕೆಟ್ ತೋರಿಸಿದರು. 'ಸಭಾಭವನದಲ್ಲಿ ಇರುವ ಕುರ್ಚಿಗಳ ಸಂಖ್ಯೆ ಮೀರಿ ಟಿಕೆಟ್ ಮಾರಿದ್ದಾರೆ ಎಂದು ನೀವು ಕೇಸ್ ಹಾಕಿಕೊಳ್ಳಿ' ಎಂದರು ಪೊಲೀಸರು.

ಲೋಹಿಯಾಗೆ ಒಂದು ಉಪಾಯ ಹೊಳೆಯಿತು. ಅಲ್ಲಿಂದ ಕೊಂಚ ದೂರ ಹೋಗಿ ಒಂದು ಟ್ಯಾಕ್ಸಿ ಹತ್ತಿ, 'ಟೆನ್ನಿಸ್ ಹಾಲ್ ಸಭಾಂಗಣದ ಎಂಟ್ರೆನ್ಸ್ ಕಡೆ ನಡಿ.'

ಟ್ಯಾಕ್ಸಿಯಿಂದ ಇಳಿದ ಲೋಹಿಯಾರನ್ನು ಪೊಲೀಸರು ಕೇಳಿದರು: 'ನೀವು ಪತ್ರಿಕೆಯವರೇನು?'.

'ಯೆಸ್ ಅಂಡ್ ನೋ' ಎಂದರು ಲೋಹಿಯಾ.

'ಒಮ್ಮೊಮ್ಮೆ ಬರೆಯುತೀನಿ; ಆದರೆ ಪ್ರೆಸ್ ಐಡೆಂಟಿಟಿ ಕಾರ್ಡ್ ನನ್ನ ಬಳಿ ಇಲ್ಲ' ಎಂಬುದು ಈ ಮಾತಿನ ಸೂಚನೆ!

ಅಷ್ಟೊತ್ತಿಗೆ ನಾಝಿ ಪಾರ್ಟಿಯ ನಾಯಕ ಪರೀಲೆ ಶೆಫರ್ ಲೋಹಿಯಾರನ್ನು ಗಮನಿಸಿ ಓಡೋಡಿ ಬಂದು ಲೋಹಿಯಾಗೆ ನಮಸ್ಕಾರ ಮಾಡಿ, 'ಇವರು ನಮ್ಮ ವಿದೇಶಿ ಪ್ರತಿನಿಧಿ' ಎಂದು ಗತ್ತಿನಲ್ಲಿ ಹೇಳುತ್ತಾ, ಮತ್ತೆ ಲೋಹಿಯಾಗೆ ನಮಸ್ಕಾರ ಮಾಡುತ್ತಾ ಅವರನ್ನು ಸಭಾಭವನದೊಳಕ್ಕೆ ಕರೆದೊಯ್ದರು. ತಾವು ಒಪ್ಪದ ಸಿದ್ಧಾಂತಗಳುಳ್ಳ ರಾಜಕೀಯ ಪಕ್ಷಗಳ ವ್ಯಕ್ತಿಗಳ ಜೊತೆಗಿನ ಆತ್ಮೀಯತೆ, ಸಂವಾದ ಕೂಡ ಲೋಹಿಯಾ ವ್ಯಕ್ತಿತ್ವದ ಭಾಗವಾಯಿತು. ಆಗ ಲೋಹಿಯಾ ಜರ್ಮನ್ ಸೋಷಲಿಸ್ಟರನ್ನು ಬೌದ್ಧಿಕವಾಗಿ ಒಪ್ಪಿದ್ದರೂ, ಭಾವನಾತ್ಮಕವಾಗಿ ಕಮ್ಯುನಿಸ್ಟರ ತೀವ್ರತೆ ಅವರಿಗೆ ಹೆಚ್ಚು ಇಷ್ಟವಾಗಿತ್ತು. ನಾಝಿಗಳ ಬ್ರಿಟಿಷ್ ವಿರೋಧವನ್ನು ಅವರು ಮೆಚ್ಚುತ್ತಿದ್ದರು.

ಹಿಟ್ಲರನ ನಾಲ್ಕು ಸಭೆಗಳಿಗೆ ಹೋದ ಲೋಹಿಯಾ ಹಿಟ್ಲರ್ ವಿದ್ಯಮಾನವನ್ನು ಅರ್ಥ ಮಾಡಿಕೊಳ್ಳಲೆತ್ನಿಸಿದರು: ಹಿಟ್ಲರ್ ಭಾಷೆಯ ಹುಸಿತನ, ಧೋರಣೆಗಳು; ಭಾಷಣಕ್ಕೆ ಆರಿಸಿಕೊಳ್ಳುತ್ತಿದ್ದ ಭಾವನಾತ್ಮಕ ವಸ್ತುಗಳು; ಅವನ ಜನಾಂಗೀಯ ಮೇಲರಿಮೆಯ ಸೊಕ್ಕು; ಮೊದಲೇ ರಿಹರ್ಸಲ್ ಮಾಡಿಕೊಂಡು ಬಂದು ಉದ್ರೇಕಕಾರಿ ಭಾಷಣ ಮಾಡುತ್ತಿದ್ದ ಹಿಟ್ಲರ್ ಮಾತುಗಳ ಅತಿ ನಾಟಕೀಯತೆ ಮತ್ತು ದೇಹ ಭಾಷೆ; ಗಲಿಬಿಲಿಗೊಂಡಿದ್ದ ಮುಗ್ಧ ಜರ್ಮನರ ಮೇಲೆ ಅವನ ಉಬ್ಬಿದ ಪದಪುಂಜಗಳ ಪ್ರಭಾವ; ಜನರೆದುರು ಕಮ್ಯುನಿಸ್ಟ್ ಹಾಗೂ ಇತರ ಪಕ್ಷಗಳನ್ನು, ಸಂಘಟನೆಗಳನ್ನು ಹೀಗಳೆದ ಹಿಟ್ಲರ್ ತನ್ನ ಪೂರ್ವಗ್ರಹಗಳನ್ನು ತುಂಬುತ್ತಿದ್ದ ರೀತಿ ಇವೆಲ್ಲದರ ಹೀನ ರಾಜಕೀಯ; ಇಂಥ ಕ್ಷುದ್ರ ರಾಜಕೀಯದ ಅಪಾಯ ಎಲ್ಲವೂ ಲೋಹಿಯಾಗೆ ಅರ್ಥವಾಗತೊಡಗಿದವು.

ಜರ್ಮನಿಯ ಡೆಮಾಕ್ರೆಟಿಕ್ ಸೋಷಲಿಸ್ಟ್ ಪಾರ್ಟಿ, ಕಮ್ಯುನಿಸ್ಟ್ ಪಾರ್ಟಿ ಹಾಗೂ ನಾಝಿ ಪಾರ್ಟಿ–ಈ ಮೂರು ಪಕ್ಷಗಳಲ್ಲೂ ಲೋಹಿಯಾಗೆ ಜರ್ಮನ್ ಗೆಳೆಯರಿದ್ದರು. ಕೆಲವು ಜರ್ಮನ್ ಗೆಳೆಯರು ಹಿಟ್ಲರ್‌ನ ನಾಝಿ ಪಾರ್ಟಿ ಸೇರಲು, ಇಂಡಿಯಾದಲ್ಲಿ ನಾಝಿವಾದವನ್ನು ಪ್ರಚಾರ ಮಾಡಲು ಲೋಹಿಯಾರನ್ನು ಕೇಳಿಕೊಂಡರು. 'ರಕ್ತ ಮತ್ತು ಜನಾಂಗದ ಮೇಲರಿಮೆ ಆಧರಿಸಿದ ಈ ನಾಝಿವಾದಕ್ಕೂ ಜರ್ಮನಿಯ ಹೊರಗಿನ ಜನಕ್ಕೂ ಏನು ಸಂಬಂಧ?' ಎಂದು ಕೇಳಿದ ಲೋಹಿಯಾ, ನಾಝಿ ಪಾರ್ಟಿಯ ಆಹ್ವಾನವನ್ನು ತಿರಸ್ಕರಿಸುತ್ತಾ ತಮ್ಮ ನಿಲುವನ್ನು ನೇರವಾಗಿ ಹೇಳಿದರು: 'ನೀವು ನಿಮ್ಮ ನಾರ್ಡಿಕ್ ಜನಾಂಗವನ್ನು ಅತ್ಯಂತ ಪರಿಶುದ್ಧ ಜನಾಂಗವೆಂದು ಪರಿಗಣಿಸುತ್ತೀರಿ. ಈ ಪಟ್ಟಿಯ ಮುಂದಿನ ಸ್ಥಾನದಲ್ಲಿ ಆಂಗ್ಲೋಸ್ಯಾಕ್ಸನ್ನರು, ಫ್ರೆಂಚರು, ಇಟ್ಯಾಲಿಯನ್ನರು, ಸ್ಪೇನೀಯರು ಬರುತ್ತಾರೆ. ನಾಲ್ಕನೆಯವರಾಗಿ ಚೀನೀಯರು, ಐದನೆಯವರಾಗಿ ಜಪಾನೀಯರು. ಇನ್ನು ರಕ್ತ ಮಿಶ್ರಣದ ಭಾರತೀಯರನ್ನೂ, ಆಫ್ರಿಕನ್ನರನ್ನೂ ಮತ್ತೂ ಕೆಳ ಶ್ರೇಣಿಯ ಜನಾಂಗಗಳಂತೆ ನೀವು ಕಾಣುತ್ತೀರಿ. ಇಂಥ ಧೋರಣೆಯುಳ್ಳ ನಾಝಿವಾದವನ್ನು ಯಾವ ದೇಶಪ್ರೇಮಿ ಭಾರತೀಯನೂ ಒಪ್ಪಿಕೊಳ್ಳುವುದಿಲ್ಲ.'

ವಿಶ್ವವಿದ್ಯಾಲಯದಲ್ಲಿದ್ದ ನಾಝಿಗಳಲ್ಲಿ ಹಿಟ್ಲರ್‌ನನ್ನು ಪ್ರಶ್ನಿಸಬಲ್ಲ ಛಾತಿಯಿದ್ದುದನ್ನು ಲೋಹಿಯಾ ಮೆಚ್ಚುತ್ತಿದ್ದರು. ನಾಝಿಗಳು ಅವರೊಡನೆ ಜಗಳಕ್ಕಿಳಿದ ಪ್ರಸಂಗವೂ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ನಡೆಯಿತು: ವಿಶ್ವ ಮಹಾಯುದ್ಧದಲ್ಲಿ ತಂತಮ್ಮ ದೇಶಗಳ ಪರವಾಗಿ ಹೋರಾಡಿ ಲಕ್ಷಾಂತರ ಬಡ ಯೋಧರು ಹುತಾತ್ಮರಾಗಿದ್ದರು. ಈ ಯೋಧರನ್ನು ಗೌರವಿಸಲು ಸಾಮಾನ್ಯ ಯೋಧನ ಪ್ರಾತಿನಿಧಿಕ ಸ್ಮಾರಕಗಳನ್ನು ಯುರೋಪಿನ ನಗರಗಳಲ್ಲಿ ನಿಲ್ಲಿಸಿದ್ದರು. ಈ ಪ್ರತಿಮೆಗಳ ಕೆಳಗೆ 'ಸೋತರೂ ಸೋಲಲಿಲ್ಲ' ಎಂಬ ವಾಕ್ಯವಿರುತ್ತಿತ್ತು. ಮಹಾಯುದ್ಧ ಮುಗಿದು ಶಾಂತಿ ಒಪ್ಪಂದ ಆದ ದಿನವನ್ನು ಶಾಂತಿಸ್ಥಾಪನೆಯ ದಿನವೆಂದು ಘೋಷಿಸಲಾಗಿತ್ತು. ಶಾಂತಿಸ್ಥಾಪನೆಯ ದಿನ ಯೋಧರ ಪ್ರತಿಮೆಗಳಿಗೆ ಹಾರ ಹಾಕಿ ಗೌರವ ಸೂಚಿಸುವ ಆಚರಣೆ ನಡೆಯುತ್ತಿತ್ತು.

ಒಮ್ಮೆ ಬರ್ಲಿನ್ ವಿಶ್ವವಿದ್ಯಾಲಯದ ಆವರಣದಲ್ಲಿದ್ದ ಯೋಧನ ಪ್ರತಿಮೆಗೆ ಹಲವರು ಹಾರ ಹಾಕಿದರು. ಜರ್ಮನ್ ಸೋಷಲಿಸ್ಟ್ ಪಾರ್ಟಿಯವರು ಕೂಡ ಹಾರ ಹಾಕಿದರು. ನಂತರ ಹಾರ ಹಾಕಲು ಬಂದ ನೌಕಾದಳದ ಪುಡಿ ನಾಯಕನೊಬ್ಬ ಜರ್ಮನಿಯ ಸೋಷಲಿಸ್ಟ್ ಪಾರ್ಟಿಯವರು ಹಾಕಿದ್ದ ಹಾರವನ್ನು ತೆಗೆದೆಸೆದ. ವಿಶ್ವವಿದ್ಯಾಲಯದಲ್ಲಿ ಗಲಾಟೆ